

ಮಲ್ಲಿಗೆಯ ಮಕರಂದ ಹೀರುವ ಹೆಣ್ಣು ಸ್ವರ್ಣ ಚಿಟ್ಟೆ.





ಕಾಡು ಮತ್ತು ನಿತ್ಯಹರಿದ್ವರ್ಣದ ಕಾಡುಗಳಲ್ಲಿ. ಉತ್ತರ ಗೋವಾದಿಂದ ದಕ್ಷಿಣ ಭಾಗದೆಲ್ಲೆಡೆ ಈ ಕಾಡುಗಳು ಕಾಣಸಿಗುತ್ತವೆ. ಪಶ್ಚಿಮ ಘಟ್ಟದಲ್ಲಿ ಮುಂಗಾರು ಮಳೆಯ ಸಮಯದಿಂದ ಡಿಸೆಂಬರ್ ತಿಂಗಳವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ.

ಸದರ್ನ್ ಬರ್ಡ್‌ವಿಂಗ್ ಚಿಟ್ಟೆಯಲ್ಲಿ ಗಂಡು ಮತ್ತು ಹೆಣ್ಣನ್ನು ಸುಲಭವಾಗಿ ಗುರುತಿಸಬಹುದು. ಗಂಡು ಚಿಟ್ಟೆಗೆ ಮೇಲಿನ ರೆಕ್ಕೆಗಳು ಕಪ್ಪಗಿದ್ದು, ಪೇಲವ ಬಿಳಿಯ ರೇಖೆಗಳು ಇರುತ್ತವೆ. ಕೆಳಗಿನ ರೆಕ್ಕೆಗಳು ಸ್ವರ್ಣ ಲೇಪಿತ ಹಳದಿ ಬಣ್ಣದಿಂದ ಅತ್ಯಾಕರ್ಷಕವಾಗಿ ಕಾಣುತ್ತವೆ. ಪ್ರಾಣಿ, ಪಕ್ಷಿಲೋಕದಲ್ಲಿ ಸಾಮಾನ್ಯವಾಗಿ ಗಂಡೇ ಸುಂದರ. ಹಾಗೆಂದೇ ದಟ್ಟವರ್ಣ ಇರಬೇಕು. ಹೆಣ್ಣಿನ ಮೇಲಿನ ರೆಕ್ಕೆಗಳು ತಿಳಿಬೂದುಮಿಶ್ರಿತ ಕಪ್ಪು ಮತ್ತು ಬಿಳಿ ಅಂಚಿನಿಂದ ಕೂಡಿರುತ್ತವೆ. ಕೆಳಗಿನ ರೆಕ್ಕೆಯಲ್ಲಿ ಕಪ್ಪು ಬಣ್ಣದ ತ್ರಿಕೋಣಾಕಾರ ಮತ್ತು ಕಪ್ಪು ಬಣ್ಣದ ಅಂಚಿನಿಂದ ಕೂಡಿರುತ್ತವೆ. ಇದರ ಎದೆಯ ಭಾಗದಲ್ಲಿ ಹಣೆಯ ಕುಂಕುಮದಂತೆ ಕೆಂಪು ಬಣ್ಣ ಇರುತ್ತದೆ. ಹೊಟ್ಟೆ ಭಾಗ ಹಳದಿ ಬಣ್ಣದಿಂದ ಕೂಡಿದ್ದು ಸಣ್ಣ ಕಪ್ಪು ಚುಕ್ಕೆ ಇರುತ್ತದೆ.

ಪಶ್ಚಿಮ ಘಟ್ಟದಲ್ಲಿ 30 ಮೀಟರ್‌ಗಿಂತ ಎತ್ತರದ ಮರದ ಮೇಲೂ ಹಾರಾಟ ನಡೆಸಿ ಮಕರಂದ ಹೀರುವುದು ಈ ಚಿಟ್ಟೆಯ ವಿಶೇಷ. ನಿಧಾನ ಗತಿಯ ಹಾರಾಟ ಇದರದ್ದು. ಹೂಗಳ ಮೇಲೆ ಕುಳಿತು ಮಕರಂದ ಹೀರುವಾಗ ಫೋಟೋ ತೆಗೆಯಲು ಸೂಕ್ತ ಸಮಯ.

ಇದನ್ನು **Southern Birdwing** ಎಂದು ಕರೆಯಲು ಇದರ ದೊಡ್ಡ ರೆಕ್ಕೆಗಳೇ ಕಾರಣ. ಇದರ ರೆಕ್ಕೆಗಳ ಹರವು 140 ರಿಂದ 190 ಮಿಲಿ ಮೀಟರ್ ಉದ್ದವಿದ್ದು, ಸಣ್ಣ ಹಕ್ಕಿಗಳಾದ ಹೂವಕ್ಕಿ ಪಕ್ಷಿಗಳ ರೆಕ್ಕೆಗಿಂತಲೂ ದೊಡ್ಡದು.

ಕರ್ನಾಟಕ ರಾಜ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಈ ಚಿಟ್ಟೆಗೆ 'ರಾಜ್ಯ ಚಿಟ್ಟೆ' ಎಂಬ ಅಧಿಕೃತ ಸ್ಥಾನಮಾನ– ನೀಡಿರುವುದು ಈಗಾಗಲೆ ಗಜೆಟ್‌ನಲ್ಲಿ ಪ್ರಕಟವಾಗಿದೆ. ವನ್ಯಜೀವಿ ಮಂಡಳಿಯ 9ನೇ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿತ್ತು. ಹಳದಿ, ಕೆಂಪು, ಬಿಳಿ ಮತ್ತು ಕಪ್ಪು ಬಣ್ಣದ ಈ ಚಿಟ್ಟೆಯನ್ನು ಎಲ್ಲಿ ನೋಡಿದರೂ ಗುರುತಿಸುವುದು ಸುಲಭ. ಈ ಚಿಟ್ಟೆಗೇ ಈ ಗೌರವ ಲಭಿಸಲು ಹಲವು ಕಾರಣಗಳಿವೆ. ಕರ್ನಾಟಕದಲ್ಲಿ ಈ ಸ್ವರ್ಣ ಚಿಟ್ಟೆ ದೊಡ್ಡ ಸಂಖ್ಯೆಯಲ್ಲಿ ಕಾಣಸಿಗುವುದು; ಭಾರತದಲ್ಲೇ ಅತಿದೊಡ್ಡ ಚಿಟ್ಟೆ ಎಂಬ ಹೆಸರು ಗಳಿಸಿರುವುದು ಎರಡು ಕಾರಣಗಳು. ಅದಕ್ಕಿಂತ ಹೆಚ್ಚಾಗಿ ಈ ಚಿಟ್ಟೆಯ ಬಣ್ಣಗಳಲ್ಲಿ ಕನ್ನಡ ಬಾವುಟದ ಕೆಂಪು ಮತ್ತು ಹಸಿರು ಬಣ್ಣಗಳಿರುವುದು ಈ ಸ್ಥಾನಮಾನ ಲಭಿಸಲು ಒಂದು ಕಾರಣವಾಗಿದೆ.